ಅ. ದಾ. ಸಂ. **158/2022**
ಡಿ. ಡಬ್ಲ್ಯೂ - **01**

ದಿನಾಂಕ: **05-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀ ಸವಾಲುಃ- ವಾದಿಯ ಪರ ಶ್ರೀ.ಆರ್. ಎಸ್, ವಕೀಲರಿಂದ:-

**01.** ಪ್ರತಿವಾದಪತ್ರ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಿಡಿ-2ರ ವಂಶವೃಕ್ಷವನ್ನು ತಹಶೀಲ್ದಾರವರ ಕಛೇರಿಯಿಂದ ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನೀವು ಸರಿಯಾಗಿ ಮಾಹಿತಿಯನ್ನು ನೀಡದೇ ನಿಡಿ-2ರಂತೆ ಸುಳ್ಳು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ 1933 ನೇ ಇಸವಿಯಲ್ಲಿ ಸರ್ವೆ ನಂ. 89 ಕ್ಕೆ ಸಂಬಂಧಿಸಿದಂತೆ ದಾಸಬೋವಿ ಮತ್ತು ತಿಮ್ಮಬೋವಿಯವರ ನಡುವೆ ಜುಬಾನೀ ವಿಭಾಗ ಆಗಿತ್ತು ಎಂದು ಹೇಳಿರುತ್ತೇನೆ ಮತ್ತು ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಸರ್ವೆ ನಂ.89ಕ್ಕೆ ಸಂಬಂಧಿಸಿದಂತೆ 1933 ಅಥವಾ ಅದಕ್ಕೂ ಹಿಂದಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

02. ವಾದಿಯು ನನ್ನ ಸಂಬಂಧಿಕರು. ವಾದಿಯು ಸ್ವಾಧೀನವನ್ನು ಬಿಡಿಸಿಕೊಡುವಂತೆ ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಮತ್ತು ಸದರಿ ವಿಷಯವನ್ನು ನನ್ನ ವಕೀಲರು ನನಗೆ ತಿಳಿಸಿದರು. ವಾದಿಯು ದಾವಸ್ವತ್ತಿಗೆ ನೀವು ತಂಟೆಯನ್ನು ಮಾಡಬಾರದು ಎಂದು ಹೇಳಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ಮತ್ತು ಪಹಣಿಯು ವಾದಿಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಹೌದು

ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-6ನ್ನು ತೋರಿಸಿದ್ದು, ಅದರಂತೆ ವಾದಿಯ ಹೆಸರಿಗೆ ದಾವಾಸ್ವತ್ತು ಪೌತಿ ಖಾತೆಯ ಆಧಾರದ ಮೇಲೆ ಬಂದಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಈಗ ಸಾಕ್ಷಿಗೆ ನಿಪಿ-1 ರಿಂದ 3ನ್ನು ತೋರಿಸಿದ್ದು, ಅದರಂತೆ ಕಲಂ. 9 ಮತ್ತು 12ರಲ್ಲಿ ದಾವಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರನ್ನು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ.

03. ನೀವು ವಾದಿಯ ಸ್ವಾಧೀನಕ್ಕೆ ತೊಂದರೆಯನ್ನು ನೀಡಿದ ಕಾರಣ ಅವರು ದಿ.06-06-2022 ರಂದು ನಿಮ್ಮ ವಿರುದ್ದ ಪೋ.ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸಾಕ್ಷಿಯು ಹೌದು ಮತ್ತು ತಾನು ಅದಕ್ಕೆ ಸಂಬಂಧಿಸಿದಂತೆ ಠಾಣೆಯಲ್ಲಿ ಹೇಳಿಕೆಯನ್ನು ನೀಡಿದ್ದೇನೆ ಎನ್ನುತ್ತಾರೆ. ಈ ದಾವೆಯಲ್ಲಿ ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ಕಂದಾಯವನ್ನು ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ನಿಪಿ-1ರಿಂದ 3ರಂತೆ ವಾದಿಯ ಹೆಸರಿಗೆ ಆಗಿರುವ ಪಹಣಿಗಳನ್ನು ನೀವು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಅರ್ಜಿಯನ್ನು ಸಲ್ಲಿಸಿದ್ದೇನೆ ಎನ್ನುತ್ತಾರೆ. ನಾನು 2016 ನೇ ಇಸವಿಯಲ್ಲಿ ಮಾಗಡಿಯ ತಾಲ್ಲೂಕು ಕಛೇರಿಗೆ ಸದರಿ ಅರ್ಜಿಯನ್ನು ಸಲ್ಲಿಸಿದ್ದೇನೆ. ನಾನು ಸಲ್ಲಿಸಿರುವ ಅರ್ಜಿಯ ಆಧಾರದ ಮೇಲೆ ತಾಲ್ಲೂಕು ಕಛೇರಿಯಲ್ಲಿ ಯಾವುದೇ ಪ್ರಕರಣ ನೋಂದಣಿ ಆಗಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**